**<u>ಸಾಕ್ಷಿಯನ್ನು ದಿಃ 21.11.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ 2ನೇ ಆರೋಪಿ ಪರ ಶ್ರೀ.ಜೆ.ಬಿ. ವಕೀಲರಿಂದಃ</u>**

ನಾನು ರಿಟನ್ಸ್ ಕೇಳಲು ಹೋದಾಗ 1ನೇ ಆರೋಪಿ ನನಗೆ ನಿಪಿ-1 ಚೆಕ್ ಅನ್ನು ನೀಡಿರುತ್ತಾರೆ. ನನಗೆ ಶೆಡ್ಯೂಲ್ ನ ಪ್ರಕಾರ ರಿಟನ್ಸ್ ಬರಬೇಕು. ನನಗೆ ರೂ.10 ಲಕ್ಷ ರಿಟನ್ಸ್ ಬರಬೇಕು. ನನ್ನ ಹೂಡಿಕೆ ರೂ.10 ಲಕ್ಷ ಆಗಿದೆ. 1ನೇ ಆರೋಪಿ ರಿಟನ್ಸ್ ಅನ್ನು ಪೆಂಡಿಂಗ್ ಇಟ್ಟು ಸತಾಯಿಸಿ ನಂತರ ರೂ.10 ಲಕ್ಷ ಚೆಕ್ ನೀಡಿದ್ದಾರೆ. ಆ ಚೆಕ್ ಅನ್ನು ಬ್ಯಾಂಕಿಗೆ ಹಾಜರುಪಡಿಸಿಲ್ಲ ಕಾರಣ 1ನೇ ಆರೋಪಿ ಆ ಚೆಕ್ ಅನ್ನು ಬ್ಯಾಂಕಿಗೆ ಹಾಜರುಪಡಿಸಬೇಡ ಹಣ ಕೊಡುತ್ತೇನೆ ಎಂದು ಹೇಳಿದರು. ದಿನಾಂಕ ನಮೂದಿಸಿ ಒಂದು ಪೋಸ್ಟ್ ಡೇಟೆಡ್ ಚೆಕ್ ಅನ್ನು ಕೊಟ್ಟು ನಾನು ಹೇಳುವವರೆಗೂ ಆ ಚೆಕ್ ಅನ್ನು ಬ್ಯಾಂಕಿಗೆ ಹಾಕಬಾರದು, ಹಣ ಬರುತ್ತಿದೆ ಕೊಡುತ್ತೇನೆ ಎಂದು ಹೇಳಿ ಅದರ ದಿನಾಂಕ ಮುಗಿದನಂತರ ಪುನಃ 2-3 ತಿಂಗಳು ಬಿಟ್ಟು ಬಾ ಎಂದು ಹೇಳುತ್ತಿದ್ದರು ನಂತರ ಪುನಃ ಒಂದು ಚೆಕ್ ಅನ್ನು 1ನೇ ಆರೋಪಿ ನೀಡುತ್ತಿದ್ದರು. ಅದೇ ರೀತಿ ಮಾಡಿ ತುಂಬ ಚೆಕ್ ನೀಡಿದ್ದಾರೆ.

ಪ್ರಃ ದಿನಾಂಕಃ07.09.2015 ರಂದು ಚೆಕ್ ಕೊಟ್ಟಗ ಆಗಲೀ ಅಥವಾ 03 ತಿಂಗಳ ಅವಧಿ ಮುಗಿಯುವ ಮುಂಚೆ ಚೆಕ್ ಅನ್ನು ಹಾಜರುಪಡಿಸುವಂತೆ 1ನೇ ಆರೋಪಿ ಬರವಣಿಗೆಯಲ್ಲಿ ಕೊಟ್ಟಿದ್ದರ?

ಉಃ ಚೆಕ್ ನ ದಿನಾಂಕದಂದು ನಾನು ಹಣ ಬಂದಿಲ್ಲ, ಚೆಕ್ ಬ್ಯಾಂಕಿಗೆ ಹಾಜರುಪಡಿಸಬೇಕ ಎಂದು ಕೇಳುವಾಗ 1ನೇ ಆರೋಪಿ ನಗದು ಹಣ ಬರುತ್ತಿದೆ ಕೊಡುತ್ತೇನೆ ಕಚೇರಿಗೆ ಬನ್ನಿ ಎಂದು ಮೊಬೈಲ್ ನಲ್ಲಿ ಹೇಳುತ್ತಿದ್ದರು. ನಾನು ಬೆಳಿಗ್ಗೆಯಿಂದ ಸಂಜೆವರೆಗೆ ಅವರ ಕಚೇರಿಯಲ್ಲಿ ಕಾಯುತ್ತಿದ್ದನು. ಆ ನಂತರ ಬಂದು ಅಲ್ಲಿ ಕೂತುಕೊಳ್ಳು ಎಂದು ಹೆದರಿಸುತ್ತಿದ್ದರು ಹಾಗೂ ಹಣ ವ್ಯವಸ್ಥೆ ಮಾಡಿದಂತೆ

ಬೇರೆಯವರಿಗೆ ಫೋನ್ ಮಾಡಿ ಮೊಬೈಲ್ ನಲ್ಲಿ ಮಾತನಾಡುತ್ತಿದ್ದರು.

ನಿಪಿ-1 ಚೆಕ್ ಅನ್ನು ಹಾಜರುಪಡಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ 1ನೇ ಆರೋಪಿ ಹಣ ಕೊಡುತ್ತೇನೆಂದು ಭರವಸೆ ನೀಡಿದ್ದರಿಂದ ಚೆಕ್ ಅನ್ನು ಬ್ಯಾಂಕಿಗೆ ಹಾಜರುಪಡಿಸಿಲ್ಲ.

ನಿಪಿ-1 ರಿಂದ 4 ಹಾಗೂ 2ನೇ ಆರೋಪಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನನಗೆ ಕನ್ನಡ, ಇಂಗ್ಲಿಷ್, ತೆಲಗು ಮತ್ತು ಇತರೆ ಭಾಷೆಗಳು ಸ್ವಲ್ಪ ಸ್ವಲ್ಪ ಬರುತ್ತಿತ್ತು. ನಿಪಿ-4 ಚೆಕ್ ಅನ್ನು ಆರೋಪಿತರ ಕಂಪನಿಗೆ ಸಂಬಂಧಪಟ್ಟಂತೆ ಹಾಜರುಪಡಿಸಿರುತ್ತೇನೆ. ಬ್ಲೂನಿಶು ಕಂಪನಿಗೆ 1ನೇ ಆರೋಪಿ ಮ್ಯಾನೇಜಿಂಗ್ ಡೈರಕ್ಟರ್ ಮತ್ತು 2ನೇ ಆರೋಪಿ ಅಸಿಸ್ಟಂಟ್ ಡೈರಕ್ಟರ್ ಆಗಿರುತ್ತಾರೆ. ನಿಪಿ-4 ಚೆಕ್ ನ ಮೇಲೆ 1ನೇ ಆರೋಪಿಯ ಹೆಸರು ಇದೆ, ಆ ಚೆಕ್ ಯಾವುದೇ ಕಂಪನಿಯ ಹೆಸರಿಲ್ಲ. ನಿಪಿ-4 ಚೆಕ್ ಬ್ಲೂನಿಶು ಟ್ರೇಡ್ ಕಂಪನಿಗೆ ಸಂಬಂಧಪಟ್ಟಂತೆ ತೋರಿಸಲು ಬ್ಯಾಂಕಿನಿಂದ ಹಿಂಬರಹ ಪಡೆದಿಲ್ಲ. ನಿಪಿ-4 ರ ಚೆಕ್ ಬ್ಲೂನಿಶು ಟ್ರೇಡ್ ಕಂಪನಿಗೆ ಸಂಬಂಧಪಟ್ಟದ್ದಲ್ಲ ಎಂದರೆ ಸರಿಯಲ್ಲ. ನಿಪಿ-4 ರ ಚೆಕ್ 1ನೇ ಆರೋಪಿಗೆ ಸಂಬಂಧಪಟ್ಟಿರಬಹುದು ಎಂದರೆ ಸಾಕ್ಷಿ ಆ ಚೆಕ್ ಬ್ಲೂನಿಶು ಟ್ರೇಡ್ ಕಂಪನಿಯ 1ನೇ ಆರೋಪಿ ಮ್ಯಾನೇಜಿಂಗ್ ಡೈರಕ್ಟರ್ ಮತ್ತು 2ನೇ ಆರೋಪಿ ಅಸಿಸ್ಟಂಟ್ ಡೈರಕ್ಟರ್ ಗೆ ಸಂಬಂಧಪಟ್ಟಿದ್ದು ಕಾರಣ ಅವರಿಬ್ಬರು ಲಾಭವನ್ನು ಹಂಚ್ಚಿಕೊಳ್ಳುತ್ತಾರೆ. ಎಂದು ಹೇಳುತ್ತಾರೆ. ನಿಪಿ-4 ರಲ್ಲಿ 2ನೇ ಆರೋಪಿಯ ಸಹಿಯಿಲ್ಲ ಎಂದರೆ ಸರಿ. ಆದರೆ ಜವಬ್ದಾರಿ ಇದೆ. ದಿಃ16.01.2015 ರ ಚೆಕ್ ನಿಪಿ-4 ಅನ್ನು ಬ್ಯಾಂಕಿಗೆ ಹಾಜರುಪಡಿಸಿಲ್ಲ. ಸಾಕ್ಷಿ ಸ್ವತಃ ಚೆಕ್ ನ ದಿನಾಂಕದಂದು ನಾನು ಹಣ ಬಂದಿಲ್ಲ, ಚೆಕ್ ಬ್ಯಾಂಕಿಗೆ ಹಾಜರುಪಡಿಸಬೇಕ ಎಂದು ಕೇಳುವಾಗ 1ನೇ ಆರೋಪಿ ನಗದು ಹಣ ಬರುತ್ತಿದೆ ಕೊಡುತ್ತೇನೆ ಕಚೇರಿಗೆ ಬನ್ನಿ ಎಂದು ಮೊಬೈಲ್ ನಲ್ಲಿ ಹೇಳುತ್ತಿದ್ದರು. ನಾನು ಬೆಳಿಗ್ಗೆಯಿಂದ ಸಂಜೆವರೆಗೆ ಅವರ ಕಚೇರಿಯಲ್ಲಿ ಕಾಯುತ್ತಿದ್ದನು. ಆ ನಂತರ ಬಂದು ಅಲ್ಲಿ ಕೂತುಕೊಳ್ಳು ಎಂದು ಹೆದರಿಸುತ್ತಿದ್ದರು ಹಾಗೂ ಹಣ ವ್ಯವಸ್ಥೆ ಮಾಡಿದಂತೆ ಬೇರೆಯವರಿಗೆ ಫೋನ್ ಮಾಡಿ ಮೊಬೈಲ್ ನಲ್ಲಿ ಮಾತನಾಡುತ್ತಿದ್ದರು.

ನನ್ನ ಬ್ಯಾಂಕ್ ಖಾತೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಇತ್ತು ಈಗ ಇಲ್ಲ. ನಿಪಿ-4 ಚೆಕ್ ಅನ್ನು ದಿಃ15.01.2015 ಬ್ಯಾಂಕಿಗೆ ಹಾಜರುಪಡಿಸಿರುವ ಬಗ್ಗೆ ಅದರ ಹಿಂದೆ ಷರಾ ಇದೆ ಎಂದರೆ ಸಾಕ್ಷಿ ನಿಪಿ-4 ಚೆಕ್ ಅನ್ನು ನಾನು ಬ್ಯಾಂಕಿಗೆ ಹಾಜರುಪಡಿಸಿಲ್ಲ. ನಿಪಿ-4 ರಲ್ಲಿ ಬ್ಯಾಂಕ್ ಸೀಲು ಇದೆ ಎಂದರೆ ಸರಿ. ಆ ಬ್ಯಾಂಕ್ ಸೀಲು ಯಾವ ಕಾರಣಕ್ಕೆ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆ ಬ್ಯಾಂಕ್ ಸೀಲನ್ನು ಯಾರು ಹಾಕಿದ್ದಾರೆ ಎಂದು ಗೊತ್ತಿಲ್ಲ. ನಿಪಿ-4 ಚೆಕ್ ಗೆ ಹಾಗೂ ನಿಪಿ-4 ಚೆಕ್ ನ ಹಿಂದೆ ಇರುವ ಬ್ಯಾಂಕ್ ಸೀಲಿಗೆ ಸಂಬಂಧಪಟ್ಟಂತೆ ನನ್ನ ಬ್ಯಾಂಕ್ ಸ್ಟೇಟ್ ಮೆಂಟ್ ಅನ್ನು ನೋಡಿ ಇದ್ದರೆ ಹಾಜರುಪಡಿಸುತ್ತೇನೆ. ಜನವರಿ-2015 ರ ಬ್ಯಾಂಕ್ ಸ್ಟೇಟ್ಮೆಂಟ್ ಅನ್ನು ಚೆಕ್ ಮಾಡಿ ಇದ್ದರೆ ಹಾಜರುಪಡಿಸಬಹುದು.

ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**